**ದಿಃ 23-08-2022 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆಃ 2 ಮತ್ತು 4 ನೇಪ್ರತಿವಾದಿಯರ ಪರ ಶ್ರೀ ಎಂ ಸಿ ಟಿ ಎಂ ವಕೀಲರಿಂದಃ**

ನಮ್ಮ ಕುಟುಂಬದ ವಂಶವೃಕ್ಷ ಇದರ ನೋಟರಿ ಪ್ರಮಾಣೀಕೃತ ದೃಡೀಕರಣ ಪತ್ರ ಹಾಜರುಪಡಿಸಿದ್ದು ನಿಡಿ-24 ಎಂದು ಗುರುತಿಸಲಾಯಿತು.ದಿಃ 28.08.1989, ದಿಃ 22.09.1995, 04.02.2000, ಈ ಮೂರು ನೊಂದಾಯಿತ ಕ್ರಯ ಪತ್ರಗಳನ್ನು ಕ್ರಮವಾಗಿ ನಿಡಿ-25 ರಿಂದ 27 ಎಂದು ಗುರುತಿಸಲಾಯಿತು. ದಿಃ 06.05.2015 ರ ನೊಂದಾಯಿತ ದಾನ ಪತ್ರ ನಿಡಿ-28 ಎಂದು ಗುರುತಿಸಲಾಯಿತು. ಒಟ್ಟು 11 ಆರ್ ಟಿ ಸಿ ಪಹಣಿ ಪತ್ರಿಕೆಗಳನ್ನು ನಿಡಿ-29 ರಿಂದ 39 ಎಂದು ಕ್ರಮವಾಗಿ ಗುರುತಿಸಲಾಯಿತು ಎರಡು ಮ್ಯೂಟೇಶನ್ ರಿಜಿಸ್ಟರ್ ನ ಪ್ರತಿಗಳು ನಿಡಿ-40 ಮತ್ತು 41 ಎಂದು , ರಶೀದಿ ಪಟ್ಟಿ ನಿಡಿ-42 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ದಿಃ 15.05.1963 ರ ಪಾಲು ವಿಬಾಗದ ಪಟ್ಟಿ ದಾಖಲೆ ಯನ್ನು ನಿಶಾನೆಯಾಗಿ ಗುರುತಿಸಲು ತಕರಾರು ಇದೆ ಎಂದು ವಾದಿ ಪರ ವಕೀಲರು ಸೂಚಿಸಿದ್ದು ಈ ಹಂತದಲ್ಲಿ ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ದಿಃ 15.05.1963 ರಂದು ತಯಾರಿಸಲಾಗಿದೆ ಎಂದು ಹೇಳುವ ಸದರಿ ಅನೊಂದಾಯಿತ ದಾಖಲೆಯಾಗಿದ್ದು ಅದರ ಬಗ್ಗೆ ವಾದ ಮತ್ತು ವಿವಾದ ಆಲಿಸಿ ಆದ್ದರಿಂದ ಅದನ್ನು ಗುರುತಿಸುವಿಕೆಯ ಬಗ್ಗೆ ತೀರ್ಮಾನಿಸಲು ಮುಂದುವರೆದ ಮುಖ್ಯ ವಿಚಾರಣೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ